

ಶ್ರೀರಾಘವೇಂದ್ರರತ್ನಾನಾಂ ರಸನಾರಂಗನರ್ತಕೀ ।
ಶಬ್ದಾಂಬುಧಿಶರಜ್ಜ್ಯೋತ್ಸ್ನಾ ಶರಣಂ ಮಮ ಶಾರದಾ ॥



# ಶ್ರೀಮನ್ ಮೂಲರಾಮಚಂದ್ರೋ ವಿಜಯತೆ

ವಸ್ತುಸ್ತುತಂ ಸುರಸ್ತ್ರೋಮೈರಸ್ತು ಶಸ್ತಂ ಮಯಾ ಸುತಮ್ ।
ಮಸ್ತುಹಸ್ತಂ ಪ್ರಸ್ತುತಾಯ ಶ್ರುತಿಮಸ್ತಕವಿಶ್ರುತಮ್ ॥



ಶ್ರೀಮದಾನಂದತೀರ್ಥೇಂದುಭಾಸನಂ ಮಮ ಮಾನಸೇ ।
ಆಶಾಸೇ ಸಾಧುಶಬ್ದಾರ್ಥಸರದೀಶಾಭಿವೃದ್ಧಯೇ ॥

ಶ್ರೀ ಪದ್ಮನಾಭ-ನರಹರಿ-ಮಾಧವ-ಅಕ್ಷೋಭ್ಯ-ಜಯತೀರ್ಥ-ರಾಮಚಂದ್ರ-ವಿಭುದೇಂದ್ರ-ರಘುನಂದನ-ಸುರೇಂದ್ರ-ಬ್ರಹ್ಮಣ್ಯ-ಶ್ರೀಪಾದರಾಜ-ವ್ಯಾಸರಾಜ-ವಿಜಯೀಂದ್ರ-ರಘೋತ್ತಮ-ಸುಧೀಂದ್ರ-ರಾಘವೇಂದ್ರ-ಯೋಗೀಂದ್ರ-ಸುಮತೀಂದ್ರ-ವಾದೀಂದ್ರ-ವಸುಧೇಂದ್ರ-ಧೀರೇಂದ್ರ-ಸತ್ಯಭೋದ-ಸತ್ಯಸಂಧ-ಭುವನೇಂದ್ರ-ವ್ಯಾಸತತ್ವಜ್ಞ-ಸುಗುಣೇಂದ್ರ-ಸುಯಮೀಂದ್ರ-ಸುಜಯೀಂದ್ರತೀರ್ಥಃ ಗುರುಭ್ಯೋ ನಮಃ

೧೭೦೪ರಲ್ಲಿ ಐಜಿ ವೆಂಕಟನರಸಿಂಹಾಚಾರ್ಯರಿಗೆ ಜನಿಸಿದ ಶ್ರೀ ವ್ಯಾಸತತ್ವಜ್ಞರು ಅಗ್ನ್ಯಾಂಶರು. ಕೃಷ್ಣದ್ವೈಪಾಯನರಾಗಿ ಉತ್ತರಾದಿ ಮತ್ತು ಶ್ರೀನಿವಾಸ ತೀರ್ಥರಾಗಿ ವ್ಯಾಸರಾಯರ ಪರಂಪರೆಯಲ್ಲಿ ಅವತಾರ ಮಾಡಿದ ಇವರು ತಮ್ಮ ೭೭ನೇ ವಯಸ್ಸಿನಲ್ಲಿ ರೈತನಿಗೆ ಗಡಾರಿ ಶಿಕ್ಷೆಯ ಘಟನೆಯಲ್ಲಿ ನಿಜಸ್ವರೂಪ ಬಯಲಾದ ಮೇಲೆ, ಶ್ರೀ ಭುವನೇಂದ್ರ ತೀರ್ಥರಿಂದ ಸನ್ಯಾಸ ಸ್ವೀಕರಿಸಿದರು. ಷೋಡಶಭಾಹು ನರಸಿಂಹನ ಪೂಜೆ ನಡೆಸಿದರು. ಮಂದನಂದಿನಿ, ಕುಲಿಶ, ನ್ಯಾಯದಮನ, ಮುಂತಾದ ಗ್ರಂಥಗಳನ್ನು ರಚಿಸಿದರು. ಗೋಪಾಲದಾಸರು ಇವರ ದತ್ತು ಮಗನಾಗಿ ಜನಿಸಿದರು. ಅಡವಿ ಸ್ವಾಮಿಗಳೆಂದೆ ಪ್ರಖ್ಯಾತರಾದ ಮಾದನೂರು ಶ್ರೀ ವಿಷ್ಣುತೀರ್ಥರು ಇವರ ಶಿಷ್ಯರು. ಅನೇಕ ಮಹಿಮೆಗಳನ್ನು ತೋರಿದ ಇವರು ತಮ್ಮ ಮಂತ್ರಾಕ್ಷತೆಯ ಮಹಿಮೆಯಿಂದ ಗದ್ವಾಲ ರಾಜ್ಯವನ್ನು ಕಾಪಾದಿದರು. ರಾಯರ ಪರಮ ಭಕ್ತರು. ೧೮೦೦ರಲ್ಲಿ ವೇಣೀಸೋಮಪುರದಲ್ಲಿ ಬೃಂದಾವನ ಪ್ರವೇಶ ಮಾಡಿ ಅಗಮ್ಯ ಮಹಿಮೆಗಳನ್ನು ತೋರಿ ಮೆರಿಯುತ್ತಿದ್ದಾರೆ. ವಾಸುದೇವವಿಟ್ಟಲ ಎಂಬ ಅಂಕಿತದಿಂದ ಅನೇಕ ದೇವರನಾಮ ರಚಿಸಿದ್ದಾರೆ. ವೇಣೀಸೋಮಪುರ ಮಂತ್ರಾಲಯದಿಂದ ೪೫ಕಿಮೀ ಮತ್ತು ಐಜಿಯಿಂದ ೧೬ಕಿಮೀ ದೂರ ಇದೆ.

## ಅಪ್ಪಣಾಚಾರ್ಯರಿಂದ ರಚಿತವಾದ ಶ್ರೀ ರಾಯರ ಸ್ತೋತ್ರದ ಕನ್ನಡಾನುವಾದ-ಪದ್ಯ ರೂಪ

ಹರಿಃ ಓಂ
ಶ್ರೀಪೂರ್ಣನ ಮಹಿಮೆಗಳನು ಉಸುರಿಸುತ
ಹರನ ಜಟೆಯನು ಬಿಟ್ಟ ಗಂಗೆಯೆನಿಸುತ
ಪೂರ್ವೋತ್ತರ ಮೀಮಾಂಸಗಳಲ್ಲಿ ಹಂಸದಂತೆ ಚರಿಸುತ
ಪಂಚಭೇದ ಮಧ್ವ ಪ್ರಮೇಯಗಳ ಪಸರಿಸುತ
ದುರ್ವಾದಿ ಹೋತಗೆ ಜಲ-ನಕ್ರನೆನಿಸುತ
ಪವಿತ್ರಗೊಳಿಸಲಿ ಎನ್ನನು ನಿಮ್ಮ ನುಡಿ-ಗಂಗೆ ಸತತ ॥೧॥
ನಿಮ್ಮ ಪಾದದ ಕಮಲಗಳನು ಆಶ್ರಯಿಸುವ ಮನುಜರ
ಅಘ ಕಳೆದು ಸಲಹಲೆಮ್ಮನು ನಿಮ್ಮ ದೃಷ್ಟಿ ವಜ್ರ ॥೨॥
ಹರಿಪಾದದ್ವಯವ ಭಜಿಸಿ ಪಡೆದಿರಿ ಜ್ಞಾನ ಭಕ್ತಿ ಸಂಪತ್
ದೇವ ಸ್ವಭಾವರೆ ಕೈಪಿಡಿಯಿರಿ ಬಿಡದೆ ಎನ್ನನು ಕಿಂಚಿತ್ ॥೩॥
ಭವ್ಯಸ್ವರೂಪರೆ ನಿಮ್ಮ ಕರುಣೆಯಾಗಲಿ ಎನ್ನಘಕೆ ದಾವಾಗ್ನಿ
ಸೇತುಸ್ವರೂಪರೆ ದಹಿಸಿ-ನಿಗ್ರಹಿಸಿ ಎನ್ನಯ ಪಾಪಾಗ್ನಿ ॥೪॥
ಕಾಷಾಯ-ಮಿತಭಾಷ ನಿಮ್ಮೆದುರು ಪ್ರತಿವಾದಿ ಮೂಕ
ವಿದ್ವನ್ಮಣಿ ನಿಮ್ಮೆದುರು ದುರ್ವಾದಿ ತೂಕವಿಲ್ಲದ ತೋಕ ॥೫॥
ಕರುಣಿಸಿರೆಮಗೆ ಸಂತಾನ ಸಂಪತ್ಪರಿಶುದ್ಧ ಭಕ್ತಿ
ಶರೀರ ದೋಷವ ಹರಿಸಿ ಕೊಡಿಸಿ ಹರಿ-ಉಕ್ತಿ ॥೬॥
ಸುರನದಿಯ ಸಮಾನವೆನಿಸುವ ನಿಮ್ಮ ಪಾದೋದಕ
ತರುತಿಹುದು ಸೇವನೆಯ ಕ್ಷಣದಲೆ ಪುಣ್ಯ ಅಸಂಖ್ಯ ॥೭॥
ಕರುಣಿಸುವರು ಸುಪುತ್ರರನು ಭಂಜಿಸಿ ಬಂಜೆಯ ಭಂಗ
ಗ್ರಹವನಿಗ್ರಹಿಸೆ, ಕುಣಿದಾಡುವನು ವ್ಯಂಗ ॥೮॥
ನಿಮ್ಮ ಪಾದಕಮಲದ ಧೂಳಿ ಭಕ್ತರ ಅಚ್ಚು ಮೆಚ್ಚು
ನಿಮ್ಮ ಸ್ಮರಣೆ ದುರಿತಕಾನನಕೆ ಕಾಡ್ಗಿಚ್ಚು ॥೯॥
ಮಧ್ವಮತ ವರ್ಧನನೆ ನೀ ಸರ್ವತಂತ್ರ ಸ್ವತಂತ್ರ
ವಿಜಯೀಂದ್ರ-ಕಣ್ಮಣಿ, ನೀ ಸುಧೀಂದ್ರರ ವರಪುತ್ರ ॥೧೦॥
ಪ್ರತಿವಾದಿ ವಿಜಯಿಗಳಲಿ ನಿನ್ನಂತಾರಿಲ್ಲ
ಚತುಃಷಷ್ಠಿ ವಿದ್ಯೆಯಲಿ ಸರಿಗಟ್ಟುವವರಿಲ್ಲ ॥೧೧॥
ಭಾವಜನಯ್ಯನ ಒಲಿಸಿ, ಧಿಕ್ಕರಿಸಿದೆ ನೀ ಭಾವಜನ
ಬೇಡಿದನೀವರಲ್ಲಿ ನಿನಗಿಲ್ಲಾರು ಸಮಾನ ॥೧೨॥
ಹೇಳಲಸಳ ನಿನ್ನ ದಯಾದಾಕ್ಷಿಣ್ಯ-ವೈರಾಗ್ಯ-ವಾಕ್ಪಾಟವ
ಆಗ್ರಹ ಮಾಡದೆ, ತೋರುವಿ ಸದಾ ಭಕ್ತರಲನುಗ್ರಹವ ॥೧೩॥
ಪಲಾಯನಗೈಯುವುದು ಕ್ಷಯಾದಿ ಭವರೋಗ
ಪಠಿಸಲು ನಿನ್ನಷ್ಟಾಕ್ಷರ ಮಂತ್ರವ ಅತಿ ವೇಗ ॥೧೪॥
ನಿನ್ನ ನಾಮ ಜಪಿಸಲು ದಿನದಿ ತ್ರಿಕಾಲ
ನಿಸ್ಸಂಶಯದಿ ಹರಿವುದು ಭವದ ಮೂಲ ॥೧೫॥
ಅಗಮ್ಯ ಮಹಿಮನೆ ಇಹದಿ ನೀ ಯತಿಗಳಿಗೆ ಇಂದ್ರ
ಮಧ್ವ ಮತದ ಪಾಲಾಬ್ಧಿಗೆ ನೀ ಸದಾ ಚಂದ್ರ ॥೧೬॥
ಕೋರಿ ಮನೋಭೀಷ್ಟವ ಸಲ್ಲಿಸುವೆ ನಮಸ್ಕಾರ
ತಿಳಿಹೇಳು ಎನಗೆ ವೇದ-ಶಾಸ್ತ್ರಗಳ ಸಾರ ॥೧೭॥
ಸರ್ವ ಯಾತ್ರ ಫಲವಹುದು ನಿಮ್ಮ ಬೃಂದಾವನದ ಪ್ರದಕ್ಷಿಣೆಯಿಂ
ಸರ್ವತೀರ್ಥ ವಾಸವಿಹುದು ನಿಮ್ಮ ಪಾದೋದಕದ ಜಲದಿಂ ॥೧೮॥
ದುಸ್ತರದ ಸಂಸಾರದಿ ನರಳುವೆನು ಹೇ ಜೀಯ
ಈ ವಿಷ ಸಮುದ್ರದ-ಭವ ದಾಟಿಸು ಹೇ ರಾಯ ॥೧೯॥
ನಿಮ್ಮ ಸ್ತೋತ್ರವ ಪಟಿಸೆ ಸದಾ ಭಕ್ತಿಪೂರ್ವಕ
ಕುಷ್ಟಾದಿ ರೋಗಗಳಿಗದೆ ನಿಜ-ಮಾರಕ ॥೨೦॥
ಅಂಧನಿಗೆ ನೇತ್ರಗಳು-ಮೂಕನಿಗೆ ವಾಕು
ಅಪಮೃತ್ಯು ಪರಹಾರ; ಪೊಗಳಲು ನಿಮ್ಮ ಪರಾಕು ॥೨೧॥
ಸ್ತೋತ್ರದಿಂ ಮಂತ್ರಿಸಿದ ಜಲದ ಪ್ರಾಶನ
ಉದರ ವ್ಯಾಧಿಗಳೆಲ್ಲಾ ಕ್ಷಣದಿ ಪಲಾಯನ ॥೨೨॥
ಸ್ತೋತ್ರದಿಂ ಬೃಂದಾವನವ ಸೇವಿಸೆ ಕುಂಟ
ತ್ವರಿತದಿಂ ಆವನಾಗುವ ಜಂಘಾಬಲದ ತುಂಟ ॥೨೩॥
ರವಿ-ಶಶಿ ಗ್ರಹಣದಲಿ ಪುಷ್ಯಾರ್ಕಾದಿ ನಕ್ಷತ್ರದಲಿ
ನಿಮ್ಮಷ್ಟೋತ್ತರವ ಜಪಿಸೆ ಪೀಡಾಹಾರ ತ್ವರಿತದಲಿ ॥೨೪॥
ಸುಸ್ಪಷ್ಟವಾಗಿ ಪಠಿಸಿ ನಿಮ್ಮೆದುರಲಿ ಈ ಸ್ತೋತ್ರ
ನಂತರದಿ ಬೆಳಗಿಸೆ ಘೃತ ದೀಪ, ಪುಟ್ಟುವನು ಸುಪುತ್ರ ॥೨೫॥
ಸುತ್ತುತ್ತಿರಲು ಸ್ತೋತ್ರದ ಮಂತ್ರಚಕ್ರ
ಧ್ವಂಸವಾಗುವುದು ಚೋರ-ವ್ಯಾಗ್ರ-ನಕ್ರ ॥೨೬॥
ಭಕ್ತರು ಭಜಿಸಲು ಸದಾ ದ್ವಂದ್ವ ಚರಣ
ಅಸುಖವೆಲ್ಲಿ?, ಸದಾ ಸುಖದ ಸಿಂಚನ ॥೨೭॥
ಇಷ್ಟಾರ್ಥಗಳು ಸಲ್ಲಿಪವು ದಯದಿಂದಲಿ ಕಮಲಾನಾಥನ
ಪಸರಿಪುದು ದಿಕ್ಕಿನಲಿ ಕೀರ್ತಿಯು... ಸಾಕ್ಷಿ ಇದಕೆ ಹಯವದನ ॥೨೮॥
ಈ ತೆರದಲಿ ಗುರುರಾಘವೇಂದ್ರ ಗುಣಸಂಪನ್ನನ
ಸ್ತೋತ್ರವ ರಚಿಸಿದನು-ಭಕ್ತಾಗ್ರಗಣಿ ಅಪ್ಪಣ್ಣ ॥೨೯॥
ಪೂಜಿಸುವೆ ರಾಘವೇಂದ್ರನ್ನ; ಸತ್ಯಧರ್ಮ ನಿರತನ್ನ
ಭಜಿಸಲು ಕಲ್ಪವೃಕ್ಷನ್ನ; ನಮಿಸಲು ಕಾಮಧೇನುವನ್ನ ॥೩೦॥
ದುರ್ವಾದಿ ಕತ್ತಲಿಗೆ ಸದಾ ವೈಷ್ಣವ ಸೂರ್ಯನ್ನ
ರಾಘವೇಂದ್ರ ಗುರುವನ್ನ; ಅತ್ಯಂತ ದಯಾಳುವನ್ನ ॥೩೧॥
ಸ್ಮರಿಸುವೆ ಗುರುವಾಕ್ಯತಿ ಪಾದದಿಂಶಿರದ ಪರ್ಯಂತ
ಕಳೆವರು ವಿಘ್ನಗಳ; ಕೊಡುವರು ಮನೋರಥ ॥೩೨॥
ಏಡಮೂಕ ಜನ್ಮೇಪಿ ಬದಿರರು
ನಿಮ್ಮ ಪ್ರಸಾದದಿ ಶೇಷನಂತೆ ವಾಕ್ಪಟರು ॥೩೩॥
ರಾಜರಾಜರು ನಿಮ್ಮೆದುರು ರಿಕ್ತರು!!
ಇದಕಂಡೆ ಭೂಸುರರು ನಿಮ್ಮನಾಶ್ರಯಿಸಿದರು. ॥೩೪॥

------ಶ್ರೀ ಕೃಷ್ಣಾರ್ಪಣಮಸ್ತು------

ಪ್ರಕಟೀಕೃತ ಟೀಕೋಕ್ತಿ, ಮರ್ಕಟೀಕೃತ ಮಾಯೀರಾಟ್ ।
ಚಕ್ರತಾತ್ **ವ್ಯಾಸತತ್ವಜ್ಞ**ಮಸ್ಕರೀಂದ್ರ ಕೃಪಾಮಯೀ ॥

ಸರ್ವಧಾರಿ, ಶ್ರಾವಣ, ಕೃಷ್ಣ, ಅಷ್ಟಮೀ, ರವಿವಾರ (೨೪-೮-೨೦೦೮)ದಂದು, ಶ್ರೀವ್ಯಾಸತತ್ವಜ್ಞರು ತಮ್ಮ ಆರಾಧನೆಯ ಅಂಗವಾಗಿ ವೇಣೀಸೋಮಪುರದಲ್ಲಿ ತಮ್ಮೆದುರೇ ಕೈಹಿಡಿದು ಬರೆಸಿದ ಪದ್ಯವಿದು

itisgrss.org

ರಚನೆಯ ಸೇವೆ: ಪಾ. ರಾ. ಶೇಷಾದ್ರಿ ರಾವ್